307

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.3089/2014/ಸನಿಕಾಸ–2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 25.7.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ**: ಶ್ರೀ ಎ.ಚಂದ್ರಶೇಖರ್, ಅಧ್ಯಕ್ಷರು, ಅಣ್ಣೇಶ್ವರ ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, ಇವರು ಗ್ರಾಮಪಂಚಾಯತಿ ಅಧ್ಯಕ್ಷರ ಹುದ್ದೆಯ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಇವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

*******

ಶ್ರೀ ಎ.ಕೃಷ್ಣಪ್ಪ, ಅಕ್ಕಳೆ ಮಲ್ಲೇನಹಳ್ಳಿ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಅವರು ಶ್ರೀ ಎ.ಚಂದ್ರಶೇಖರ್, ಅಧ್ಯಕ್ಷರು, ಅಣ್ಣೇಶ್ವರ ಗ್ರಾಮ ಪಂಚಾಯತಿ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಅವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಸಕಲಂ 9ರ ಅಡಿಯಲ್ಲಿ ದಾಖಲಿಸಿ, ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ಪ್ರಕರಣದ ಸಂಕ್ಷಿಪ್ತ ವಿವರಣೆ:–**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಅಣ್ಣೇಶ್ವರ ಗ್ರಾಮಪಂಚಾಯತಿ ಅಧ್ಯಕ್ಷರಾದ ಎದುರುದಾರರು ದಿ.19.11.2013ರಂದು ಅಧಿಕಾರ ವಹಿಸಿಕೊಂಡಾಗಿನಿಂದಲೂ ಪಾರದರ್ಶಕ ನಿಯಮವನ್ನು ಪಾಲಿಸದೆ ಸ್ವಹಿತಾಸಕ್ತಿಯಿಂದ ತನ್ನ ಚಿಕ್ಕಪ್ಪನ ಮಗನಿಗೆ ಕಾಮಗಾರಿಗಳನ್ನು ಗುತ್ತಿಗೆ ನೀಡಿರುತ್ತಾರೆ. ಈ ಬಗ್ಗೆ ಕ್ರಮಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ದೂರು ನೀಡಿದ್ದು, ಅವರ ನ್ಯಾಯಾಲಯದಲ್ಲಿ ಮಿಸಲೇನಿಯಸ್.ಸಿ.ಆರ್/28/2013–14ರಂತೆ ಪ್ರಕರಣ ದಾಖಲಾಗಿದ್ದರೂ ಸಹಾ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಸಾಮಗ್ರಿಗಳನ್ನು ಸರಬರಾಜು ಮಾಡದೆ ಬಿಲ್ ಮಾಡಿರುತ್ತಾರೆ. ಪಂಚಾಯತಿಯಲ್ಲಿ ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿರುತ್ತದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಪಂಚಾಯತ್ ರಾಜ್ ಅಧಿನಿಯಮ 1993 ನಿಯಮ 12(ಹೆಚ್)ರಂತೆ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರ ಹೆಂಡತಿ ಪ್ರಸ್ತುತ ಗ್ರಾಮಪಂಚಾಯತಿ ಸದಸ್ಯರಾಗಿರುತ್ತಾರೆ. ಇವರಿಬ್ಬರೂ ಸೇರಿ ಪಂಚಾಯತಿಯ ಕೆಲಸಗಳನ್ನು ಬೇರೆಯವರ ಹೆಸರಿನಲ್ಲಿ ತಮ್ಮ ಸಂಬಂಧಿಕರಿಗೆ ಗುತ್ತಿಗೆ ಕೆಲಸ ನೀಡಿರುತ್ತಾರೆ. ತಾನು ಅಧ್ಯಕ್ಷನಾಗಿದ್ದಾಗ ಯಾವುದೇ ಅಕ್ರಮಗಳನ್ನು ಎಸಗದೆ ಗ್ರಾಮಪಂಚಾಯತಿ ಅಭಿವೃದ್ಧಿಗಾಗಿ ಕೆಲಸ ಮಾಡಿದ್ದು ಇರುತ್ತದೆ. ತಾನು ಮಾಡಿದ ಕೆಲಸ ಪ್ರಶಂಶಿಸಿ ಪಂಚಾಯತಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಲಭಿಸಿರುತ್ತವೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರಿಗಿಂತ ಪೂರ್ವದಲ್ಲಿದ್ದ ಅಧ್ಯಕ್ಷರು ಮಾಡಿದ ಕೆಲಸಕ್ಕಾಗಿ ಅಣ್ಣೇಶ್ವರ ಪಂಚಾಯತಿಗೆ ಪ್ರಶಸ್ತಿ–ಪುರಸ್ಕಾರಗಳು ಲಭಿಸಿರುತ್ತವೆ. ಹಿಂದಿನ ಅಧ್ಯಕ್ಷರು ಮಾಡಿದ ಒಳ್ಳೆಯ ಕೆಲಸ ಪರಿಗಣಿಸಿ, ಪಂಚಾಯತಿಗೆ ಪ್ರಶಸ್ತಿ–ಪುರಸ್ಕಾರಗಳನ್ನು ನೀಡಿದ್ದು, ಆದರೆ ಆ ವೇಳೆಯಲ್ಲಿ ಎದುರುದಾರರು ಅಧ್ಯಕ್ಷರಾಗಿರುವುದರಿಂದ ತಾನೇ ಆ ಕೆಲಸ ಮಾಡಿದ್ದಾಗಿ ತಿಳಿಸಿರುತ್ತಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತಕ್ರಮಕ್ಕೈಗೊಳ್ಳಬೇಕೆಂದು ತಿಳಿಸಿರುತ್ತಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ,ದೂರುದಾರರ ಆಪಾದನೆಗಳನ್ನು ತನಿಖೆ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅವರಿಗೆ ವಹಿಸಿದ್ದು, ಅವರು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಎದುರುದಾರರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ದೂರಿನಲ್ಲಿ ಆಪಾದಿಸಿರುವಂತೆ ಯಾವುದೇ ಅಕ್ರಮಗಳು ಜರುಗಿರುವುದಿಲ್ಲ.

6. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993, 2000ರ ಪ್ರಕಾರ ಗ್ರಾಮಪಂಚಾಯತಿಯಿಂದ ಅನುಷ್ಠಾನಗೊಳಿಸುವ ಕಿರು ನೀರು ಯೋಜನೆ ಹಾಗೂ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಕ್ರಮವಾಗಿ 2 ಲಕ್ಷ ಮೇಲ್ಪಟ್ಟು, ಹಾಗೂ ಇತರ ಕಾಮಗಾರಿಗಳಿಗೆ 5 ಲಕ್ಷ ಮೇಲ್ಪಟ್ಟಿದ್ದಲ್ಲಿ ಮಾತ್ರ ಟೆಂಡರ್ ನಿಯಮದಡಿ

ಅನುಷ್ಠಾನಗೊಳಿಸುವುದು ಕಡ್ಡಾಯವಾಗಿರುತ್ತದೆ. ಎದುರುದಾರರು ಕೈಗೊಂಡಿರುವ ಸುಮಾರು 60 ಕಾಮಗಾರಿಗಳು 1 ಲಕ್ಷಕ್ಕೂ ಮೇಲ್ಪಟ್ಟಾಗಿದ್ದು, ಗುತ್ತಿಗೆದಾರ ಎ.ಎನ್.ಮಹೇಶ್, ಡಿ.ಆನಂದ್, ಚನ್ನಕೇಶವ.ಆರ್., ಎಸ್. ಲೋಕೇಶ್, ಎಂ.ಎನ್.ರಾಜಣ್ಣ, ಬಾಲಾಜಿ ಮತ್ತು ಚೇತನ ಸಹಾ ಆಗಿರುತ್ತಾರೆ. ಕೇವಲ ಎ.ಎನ್.ಮಹೇಶ್ ಎದುರುದಾರರ ಸಂಬಂಧಿಕನೆಂದು ಅವರ ವಿರುದ್ಧ ಅಲ್ಲದೆ ಬೇರೆ ಎಲ್ಲಾ ಗುತ್ತಿಗೆದಾರರಿಗೂ ಅನ್ವಯಿಸುತ್ತದೆ ಅಂತ ಅಭಿಪ್ರಾಯಪಟ್ಟಿರುತ್ತಾರೆ.

7. ಈ ಪ್ರಕರಣದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಎದುರುದಾರರ ಚಿಕ್ಕಪ್ಪನ ಮಗನಾದ ಎ.ಎನ್.ಮಹೇಶ್ ರವರಿಗೆ ಗ್ರಾಮಪಂಚಾಯತಿಯಿಂದ ಸಾಕಷ್ಟು ತುಂಡು ಗುತ್ತಿಗೆ ನೀಡಿದ ಬಗ್ಗೆ ದಾಖಲಾತಿಗಳು ಲಭ್ಯವಿರುತ್ತವೆ. ಗ್ರಾಮಪಂಚಾಯತಿಯಿಂದ ಕೈಗೊಳ್ಳುವ ಕಾಮಗಾರಿಗಳಲ್ಲಿ ಹೆಚ್ಚಿನ ಪಾಲು ಎ.ಎನ್.ಮಹೇಶ್‌ರವರೇ ಗುತ್ತಿಗೆ ಪಡೆದಿದ್ದು, ಯಾವುದೋ ಒಂದು ಕಾಮಗಾರಿಯನ್ನು 2-3 ಬೇರೆ ವ್ಯಕ್ತಿಗಳಿಗೆ ನೀಡಿರುತ್ತಾರೆ. ಇದರಿಂದ ಕಂಡುಬರುವುದೇನೆಂದರೆ ಎದುರುದಾರರು ತನ್ನ ಸಂಬಂಧಿಗೆ ಗ್ರಾಮಪಂಚಾಯತಿ ತುಂಡುಗುತ್ತಿಗೆಗಳನ್ನು ನೀಡಲು ಪ್ರಭಾವ ಬೀರಿ ಅದರಿಂದ ಪರೋಕ್ಷವಾಗಿ ಲಾಭ ಪಡೆದುಕೊಳ್ಳುವ ಉದ್ದೇಶವಿದೆಯೆಂದು ಕಂಡುಬರುತ್ತದೆ. ಇದು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 12(ಹೆಚ್) ಉಲ್ಲಂಘನೆಯಾಗಿರುತ್ತದೆ.

8. ಎದುರುದಾರರು ತಮ್ಮ ಸಂಬಂಧಿಕರಿಗೆ ಗುತ್ತಿಗೆಗಳನ್ನು ವಹಿಸಿರುವುದರಿಂದ ಅಧಿಕಾರ ಹಾಗೂ ಹಣ ದುರುಪಯೋಗ ಆಗಿದ್ದು, ಕರ್ನಾಟಕ ಪಾರದರ್ಶಕ ಅಧಿನಿಯಮ 1999/2000 ಉಲ್ಲಂಘನೆಯಾಗಿದೆಯೆಂದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಎದುರುದಾರರು ಚುನಾಯಿತ ಪ್ರತಿನಿಧಿಯಾಗಿ ಗ್ರಾಮಪಂಚಾಯತಿ ಅಧ್ಯಕ್ಷರಾಗಿರುವುದರಿಂದ ಅವರು ಈ ರೀತಿ ಗ್ರಾಮಪಂಚಾಯತಿಯ ಅಧಿಕಾರ ದುರುಪಯೋಗ ಪಡಿಸಿಕೊಂಡು ಸ್ವಹಿತಾಸಕ್ತಿಯಲ್ಲಿ ತೊಡಗಿ ಆ ಮೂಲಕ ಸಾರ್ವಜನಿಕ ಹಣವನ್ನು ಪರೋಕ್ಷವಾಗಿ ದುರುಪಯೋಗಪಡಿಸಿಕೊಂಡಿದ್ದು ಕಂಡುಬರುತ್ತದೆ. ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ.2(12)(ಇ)

ಅಡಿಯಲ್ಲಿ ಸಾರ್ವಜನಿಕ ಸೇವಕ ವ್ಯಾಪ್ತಿಗೆ ಬರುತ್ತಿದ್ದು, ಅವರ ವಿರುದ್ಧ ಕ್ರಮಕೈಗೊಳ್ಳಲು ಈ ಅಧಿನಿಯಮದಡಿಯಲ್ಲಿ ಅಧಿಕಾರವಿರುತ್ತದೆ.

9. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಡಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ಎದುರುದಾರರು ಗ್ರಾಮಪಂಚಾಯತಿ ಅಧ್ಯಕ್ಷರ ಹುದ್ದೆಯಲ್ಲಿದ್ದುಕೊಂಡು ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಇವರ ವಿರುದ್ಧ ಸೂಕ್ತ ಕಾನೂನು ಕ್ರಮಕೈಗೊಳ್ಳಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

21/7/17

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

25/7